# ವೈಷ್ಣವ ಧರ್ಮ ಇಲ್ಲವಾಗಿದ್ದರೆ ದೇಗುಲಗಳೇ ಇರುತ್ತಿರಲಿಲ್ಲ

**ಕಾರ್ಯಕ್ರಮ**

'ಸಿದ್ಧಾಂತ ಬಿಂದು' ಅನುವಾದಿತ ಕೃತಿ ಬಿಡುಗಡೆ. ಸಂಸ್ಕೃತ ಮೂಲ: ಶ್ರೀ ಮಧುಸೂದನ ಸರಸ್ವತಿ. ಕನ್ನಡಕ್ಕೆ ಪ್ರೊ.ಎಂ.ಎ.ಹೆಗಡೆ

**ಪ್ರಕಾಶಕರು:** ಉದಯ ಪ್ರಕಾಶ

**ಆಯೋಜಕರು:** ಸಹ್ಯಾದ್ರಿ ಗೆಳೆಯರು

**ಎಲ್ಲಿ? ಯಾವತ್ತು?**

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಭಾನುವಾರ

**ಯಾರಿದ್ದರು?:**

ವಿದ್ವಾನ್ ರಂಗನಾಥ ಶರ್ಮ, ಡಾ.ಯು.ಆರ್. ಅನಂತಮೂರ್ತಿ, ವಿಮರ್ಶಕ ಎಸ್.ಆರ್.ವಿಜಯ ಶಂಕರ್, ಸಂಸ್ಕೃತ ವಿದ್ವಾಂಸ ಡಾ.ಶ್ರೀರಾಮ ಭಟ್, ಅನುವಾದಕ ಪ್ರೊ.ಎಂ.ಎ.ಹೆಗಡೆ, ಪ್ರಕಾಶಕ ಮ.ಸು.ಶ್ರೀನಿವಾಸರಾಯ



ಉದಯ ಪ್ರಕಾಶ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಿದ್ಧಾಂತ ಬಿಂದು' ಕೃತಿಯನ್ನು ಮ.ಸು. ಶ್ರೀನಿವಾಸರಾಯ, ಪ್ರೊ.ಎಂ.ಎ.ಹೆಗಡೆ, ವಿಜಯ ಶಂಕರ್, ರಂಗನಾಥ ಶರ್ಮ, ಡಾ.ಯು.ಆರ್. ಅನಂತಮೂರ್ತಿ ಬಿಡುಗಡೆ ಮಾಡಿದರು.

## ಯಾರು ಏನೆಂದರು?

ವೈಷ್ಣವ ಧರ್ಮ ಇಲ್ಲವಾಗಿದ್ದರೆ ದೇಶದಲ್ಲಿ ದೇವಾಲಯಗಳೇ ಇರುತ್ತಿರಲಿಲ್ಲ. ಈ ಪ್ರಕಾರ ಹೇಳುವುದಾದರೆ, ಭಾರತದಲ್ಲಿ ನಾಗರಿಕ ಸಮಾಜ ನಿರ್ಮಾಣಗೊಳ್ಳುವಲ್ಲೂ ವೈಷ್ಣವ ಧರ್ಮ ಪ್ರಮುಖ ಪಾತ್ರ ವಹಿಸಿದೆ. ಉಳಿದಂತೆ, ಭಕ್ತಿ ಎನ್ನುವುದು ಅಪಾಯ. ಆದರೆ, ಭಕ್ತಿ, ಜ್ಞಾನ ಮತ್ತು ಕರ್ಮ ಎಂಬ ಮೂರು ಮಾರ್ಗಗಳು- ಅನಾದಿ ಕಾಲದಿಂದಲೂ ಸಾಮಾಜಿಕ ಅನ್ಯಾಯಗಳನ್ನು ವಿರೋಧಿಸುವಲ್ಲಿ ನೆರವಾಗಿವೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ಎಲ್ಲರನ್ನೂ ದೇವರ ಮಕ್ಕಳು ಎಂದು ಕರೆದಿದ್ದರೆ ಸಮಾಜದಲ್ಲಿ ಜಾತಿ ವ್ಯವಸ್ಥೆ, ಅಸಮಾನತೆ ಎಂಬುದೇ ಇರುತ್ತಿರಲಿಲ್ಲ.

**ಅನಂತಮೂರ್ತಿ**

ಭಾರತೀಯ ಪರಂಪರೆ ಬಗ್ಗೆ ಕೃತಿ ಸಾಕಷ್ಟು ಮಾಹಿತಿ ಒದಗಿಸುತ್ತದೆ. ಜತೆಗೆ, ಇಲ್ಲಿಯ ಸಾಧಕ- ಬಾಧಕಗಳ ಬಗ್ಗೆಯೂ ಇಲ್ಲಿ ಪ್ರಸ್ತಾಪವಿದೆ. ಇಷ್ಟಾದರೂ, 'ಸಿದ್ಧಾಂತ ಬಿಂದು' ಪರಂಪರೆ ಎಂಬ ಸಮುದ್ರದಲ್ಲಿ ಒಂದು ಬಿಂದು ಅಷ್ಟೇ.

**ಶ್ರೀರಾಮ ಭಟ್**

ಕನ್ನಡ ಜಾಯಮಾನಕ್ಕೆ ಒಗ್ಗುವಂತೆ ಅನುವಾದಿಸಿದ್ದಾರೆ. ಈ ಮೂಲಕ ಸಂಸ್ಕೃತವನ್ನು ಕನ್ನಡಕ್ಕೆ ಇಷ್ಟು ಸರಳವಾಗಿ ಅನುವಾದಿಸಬಹುದು ಎಂದು ನಿರೂಪಿಸಿದ್ದಾರೆ.

**ರಂಗನಾಥ ಶರ್ಮ**